C.C. No.-6700 /2025
CW-10 / PW-6

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ
(ಸಂಚಾರಿ ನ್ಯಾಯಾಲಯ) ಕಾರಟಗಿ .
ಸಾಕ್ಷಿಯನ್ನು ದಿನಾಂಕ- **07.04.2026** ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಕಾಮಣ್ಣ |
| ತಂದೆ / ಗಂಡನ ಹೆಸರು- | ಹರಿಶ್ಚಂದ್ರ |
| ವಯಸ್ಸು- | 59 ವರ್ಷಗಳು |
| ಉದ್ಯೋಗ- | ಪಿ.ಎಸ್.ಐ, ಕಾರಟಗಿ ಪೊಲೀಸ್ ಠಾಣೆ |
| ವಾಸಸ್ಥಳ- | ಕಾರಟಗಿ |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

ನಾನು ದಿಃ **29-12-2023** ರಿಂದ ಇಲ್ಲಿಯವರೆಗೆ ಕಾರಟಗಿ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 18-08-2025 ರಂದು ಆರೋಪಿಯು ಪತ್ತೆಯಾದ ಕಾರಣ ಮರುತನಿಖೆಯನ್ನು ಮಾಡಲು ಕಡತವನ್ನು ನ್ಯಾಯಾಲಯದಿಂದ ಪರವಾನಿಗೆಯನ್ನು ಪಡೆದುಕೊಂಡು ತನಿಖೆಯನ್ನು ಕೈಗೊಂಡಿರುತ್ತೇನೆ. ಸಾಕ್ಷಿಯು ಸದರಿ ಪರವಾನಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-1 ಮತ್ತು 2 ರವರನ್ನು ಠಾಣೆಗೆ ಬರಮಾಡಿಕೊಂಡು ಅವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-3 ಮತ್ತು 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ-6 ಮತ್ತು 8 ರವರ ಸಮಕ್ಷಮ ನೋಟಿಸ್ ನೀಡಿ ಬರಮಾಡಿಕೊಂಡು ಅವರ ಸಮಕ್ಷಮ ಆರೋಪಿತನು ತೋರಿಸಿದ ಸ್ಥಳದಲ್ಲಿ ಅಂದರೆ ಚಾಸಾ-1 ರವರ ಮನೆಯಲ್ಲಿ ನಿಪಿ-3 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದೇ ಸಮಯದಲ್ಲಿ ನಿಪಿ-4 ರಂತೆ ಭಾವಚಿತ್ರವನ್ನು ತೆಗೆಯಲಾಗಿರುತ್ತದೆ. ನಂತರ ಅದೇ ದಿನ ಚಾಸಾ-6 ಮತ್ತು 8 ರವರ ಸಮಕ್ಷಮ ಆರೋಪಿತನು ಕಳ್ಳತನ ಮಾಡಿ ಉಳಿದ ರೂ.65,000/- ಗಳನ್ನು ನಿಪಿ-5 ರಂತೆ ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತೇನೆ. ಅದೇ ಸಮಯದಲ್ಲಿ ನಿಪಿ-6 ರಂತೆ ಭಾವಚಿತ್ರವನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ನಿಪಿ-3 ಮತ್ತು 5 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-3(ಸಿ) ಮತ್ತು ನಿಪಿ-

5(ಸಿ) ಎಂದು ಗುರುತಿಸಲಾಯಿತು. ನಿಪಿ-5 ರಂತೆ ವಶಪಡಿಸಿಕೊಂಡ ಹಣವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ-4 ಎಂದು ಗುರುತಿಸಲಾಗಿದೆ. ಅದೇ ದಿನ ಆರೋಪಿಯ ಸ್ವ-ಖುಷಿಯ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಸ್ವತ್ತು ಪಟ್ಟಿ ಸಂಖ್ಯೆಃ 116/2025 ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಆರೋಪಿತನ ವಿರುದ್ಧ ದಸ್ತಗಿರಿ ಕ್ರಮವನ್ನು ಜರುಗಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡಲಾಗಿರುತ್ತದೆ. ದಿನಾಂಕಃ 27-09-2025 ರಂದು ತನಿಖೆಯನ್ನು ಪೂರ್ಣಗೊಂಡಿದ್ದು ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಕಂಡು ಬಂದ ಕಾರಣ ಆತನ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಈ ದಿನ ವಿ.ಸಿ ಮುಖಾಂತರ ಹಾಜರಾದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು-ಶ್ರೀ ಹೆಚ್.ಬಿ.ಎ ಆರೋಪಿ ಪರ ವಕೀಲರಿಂದ-</u>

3. ನನಗಿಂತ ಪೂರ್ವದಲ್ಲಿ ಚಾಸಾ-9 ಈ ಪ್ರಕರಣದ ತನಿಖಾಧಿಕಾರಿಯಾಗಿದ್ದರು. ಮೊದಲು ಸಿ ವರದಿಯನ್ನು ಸಲ್ಲಿಸಿದ ಪ್ರಕರಣವಾಗಿರುತ್ತದೆ. ಆರೋಪಿಯ ಸ್ವ-ಖುಷಿಯನ್ನು ಹೇಳಿಕೆಯನ್ನು ಪಡೆದುಕೊಂಡು ಆತನೊಂದಿಗೆ ಗುನ್ನಾ ಸ್ಥಳಕ್ಕೆ ಹೋಗಿರುತ್ತೇನೆ. ಆ ದಿನ ಅಲ್ಲಿದ್ದ ಟ್ರಿಜೋರಿ ಯಾವ ಕಂಪನಿಯದು ಎಂದು ನೋಡಿರುವುದಿಲ್ಲ. ಚಾಸಾ-6 ಮತ್ತು 8 ರವರನ್ನು ಕರೆತರಲು ರಮೇಶ ಪಿ.ಸಿ ಇವರ ಮುಖಾಂತರ ನೋಟಿಸ್ ನೀಡಿ ಬರಮಾಡಿಕೊಂಡಿರುತ್ತೇನೆ. ಪಂಚರು ಠಾಣೆಗೆ ಬಂದಾಗ ಸುಮಾರು 3.00 ಗಂಟೆ ಸಮಯವಾಗಿತ್ತು. ಗುನ್ನಾ ಸ್ಥಳಕ್ಕೆ ಹೋದಾಗ 3.30 ಗಂಟೆ ಆಗಿತ್ತು. ನಿಪಿ-3 ನ್ನು ಬರೆಯಲು ಸುಮಾರು 1.00 ಗಂಟೆ ಸಮಯಬೇಕಾಗುತ್ತದೆ. ನಿಪಿ-3 ನ್ನು ಮಾಡುವ ಸಮಯದಲ್ಲಿ ಬಹಳ ಜನ ಇದ್ದರು ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಯಾವ ದಿನಾಂಕ, ಸಮಯ ಹಾಗೂ ಸ್ಥಳ ಎಂದು ಕಾಣಿಸುವುದಿಲ್ಲ ಎಂದರೆ ಸರಿ. ನಾವು ಸ್ಥಳಕ್ಕೆ ಹೋದಾಗ ಟ್ರಿಜರಿ ಬಾಗಿಲು ತೆಗೆದಿತ್ತು. ಸಾಕ್ಷಿಯು ಮುಂದುವರೆದು ಆರೋಪಿಯು ಟ್ರಿಜರಿಯನ್ನು ತೋರಿಸಿ ಅಲ್ಲಿಯೇ ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾನೆ. ನಿಪಿ-5 ನ್ನು ಜರುಗಿಸುವ ಪೂರ್ವದಲ್ಲಿ ನನ್ನ ಹಾಗೂ ಸಿಬ್ಬಂದಿಗಳ ಹಾಗೂ ಚಾಸಾ-6 ಮತ್ತು 8 ರವರ ಅಂಗಜಪ್ತಿ

ಮಾಡಿರುವುದಿಲ್ಲ. ನಿಪಿ-4 ಮತ್ತು 6 ನ್ನು ಫೋನ್‌ನಲ್ಲಿ ತೆಗೆಯಲಾಗಿರುತ್ತದೆ. ಆದರೇ ಯಾವ ಕಂಪನಿಯ ಫೋನ್ ಎಂದು ನನಗೆ ನೆನಪಿಲ್ಲ. ನಿಪಿ-5 ನ್ನು ಜರುಗಿಸುವ ಕಾಲದಲ್ಲಿ ಆರೋಪಿಯು ರೂ.500 ಮುಖಬೆಲೆಯ 120 ನೋಟುಗಳನ್ನು ಹಾಜರುಪಡಿಸಿರುತ್ತಾನೆ. ನಿಪಿ-5 ರಲ್ಲಿ ಸದರಿ ಹಣದ ಸಿರಿಯಲ್ ನಂಬರಗಳನ್ನು ನಮೂದಿಸಿರುವುದಿಲ್ಲ. ತನಿಖೆ ಮಾಡುವ ಕಾಲಕ್ಕೆ Dog Squad ಹಾಗೂ ಆರೋಪಿಯ ಪಿಂಗರ್ ಪ್ರಿಂಟ್ಸ್‌ಗಳನ್ನು ಪಡೆದಿರುತ್ತೀರಿಯೇ ಎಂದರೆ ಸಾಕ್ಷಿಯು ಮೊದಲು ತನಿಖೆ ಮಾಡಿದಾಗ Dog Squad ನ್ನು ಕರೆಸಿದ್ದು ನಂತರ ಆರೋಪಿಯ ಪಿಂಗರ್ ಪ್ರಿಂಟ್ಸ್‌ಗಳ ಬಗ್ಗೆ ತನಿಖೆ ಮಾಡಿರುವುದಿಲ್ಲ. ಗುನ್ಹಾ ಸ್ಥಳದ ಹತ್ತಿರ ಸಿ.ಸಿ ಕ್ಯಾಮೇರಾಗಳು ಇವೆ ಎಂದರೆ ಸರಿ. ಚಾಸಾ-1 ರವರ ಮನೆಗೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಚಾಸಾ-6 ಮತ್ತು 8 ರವರು ಚಾಸಾ-1 ರವರ ಪರಿಚಯಸ್ಥರು ಎಂದರೆ ನನಗೆ ಗೊತ್ತಿಲ್ಲ.

4. ಚಾಸಾ-2 ರವರು ದಿನಾಂಕಃ 18-08-2025 ರಂದು ಎಷ್ಟು ಗಂಟೆಗೆ ತಮ್ಮ ಮರುಹೇಳಿಕೆಯನ್ನು ನೀಡಿದ್ದರು ಎಂದು ನನಗೆ ನೆನಪಿಲ್ಲ. ಆ ಸಮಯದಲ್ಲಿ ಚಾಸಾ-2 ರವರಿಗೆ ಹೇಳಿಕೆಯನ್ನು ನೀಡಲು ಮಾನಸಿಕವಾಗಿ ಸಬಲ ಇರಲಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದನ್ನು ಆರೋಪಿ ಹೇಳಿದಂತೆ ಬರೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ನಿಪಿ-5 ರಲ್ಲಿ ವಶಪಡಿಸಿಕೊಂಡ ಹಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಮುಂಚೆ ಸಲ್ಲಿಸಿದ ಸಿ ವರದಿಯಲ್ಲಿ ಒಬ್ಬ ಆರೋಪಿಯನ್ನು ಸೇರಿಸಲು ಈ ಆರೋಪಿಯ ವಿರುದ್ಧ ಸುಳ್ಳು ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾಸಾ-1 ರಿಂದ 4 ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆತನನ್ನು ಠಾಣೆಗೆ ನಾವೇ ಬರಮಾಡಿಕೊಂಡು ಆತನ ವಿರುದ್ಧ ಸುಳ್ಳು ದೋಷರೋಪಣಾ ಪಟ್ಟಿಯನ್ನು

ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ.
(ಸಂಚಾರಿ ನ್ಯಾಯಾಲಯ ಕಾರಟಗಿ)